ಸ್ಥಾಪನೆ: ೧೯೧೫

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಡಾ. ಎಂ. ವಿಶ್ವೇಶ್ವರಯ್ಯ ಸರ್ ಮಿರ್ಜಾ ಇಸ್ಮಾಯಿಲ್

ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ ಪ್ರದಾನ

೨೬-೧೨-೨೦೨೩, ಮಂಗಳವಾರ
ಸಂಜೆ : ೫-೩೦ ಗಂಟೆಗೆ

ಸ್ಥಳ : ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಪ್ರಶಸ್ತಿ ಪುರಸ್ಕೃತರು
ಶ್ರೀ ಟಿ.ಎ. ನಾರಾಯಣಗೌಡ
ರಾಜ್ಯಾಧ್ಯಕ್ಷರು,
ಕರ್ನಾಟಕ ರಕ್ಷಣಾ ವೇದಿಕೆ,
ಬೆಂಗಳೂರು

ಸರ್ವರಿಗೂ ಅತ್ಯೀಯ ಸ್ವಾಗತ

ನೇ.ಭ. ರಾಮಲಿಂಗ ಶೆಟ್ಟಿ
ಗೌರವ ಕಾರ್ಯದರ್ಶಿ

ಡಾ. ಪದ್ಮಿನಿ ನಾಗರಾಜು
ಗೌರವ ಕಾರ್ಯದರ್ಶಿ

ಜಿ.ಎಂ. ಪಟೇಲ್‌ಪಾಂಡು
ಗೌರವ ಕೋಷಾಧ್ಯಕ್ಷರು

ಸ್ಥಾಪನೆ: ೧೯೧೫

ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ ಪ್ರದಾನ

ಕಾರ್ಯಕ್ರಮ

ದಿವ್ಯ ಸಾನ್ನಿಧ್ಯ
ಶ್ರೀ ಶ್ರೀ ಶ್ರೀ ಶಿವಾನಂದ ಶಿವಯೋಗಿ ಸ್ವಾಮೀಜಿ
ಶ್ರೀಕ್ಷೇತ್ರ ಕೋಡಿಮಠ, ಅರಸೀಕೆರೆ ತಾಲೂಕು, ಹಾಸನ

ಶ್ರೀ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ
ಶ್ರೀಗುರುಶಾಂತೇಶ್ವರ ಸಂಸ್ಥಾನ ಹಿರೇಮಠ, ಹುಕ್ಕೇರಿ

ಅಧ್ಯಕ್ಷತೆ
ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಉದ್ಘಾಟನೆ
ಡಾ. ಹಂಪ ನಾಗರಾಜಯ್ಯ
ಹಿರಿಯ ವಿದ್ವಾಂಸರು, ಬೆಂಗಳೂರು

ಪ್ರಶಸ್ತಿ ಪ್ರದಾನ
ನ್ಯಾಯಮೂರ್ತಿ ಅರಿಜಿ ನಾಗರಾಜ
ವಿಶ್ರಾಂತ ನ್ಯಾಯಮೂರ್ತಿಗಳು, ಉಚ್ಚನ್ಯಾಯಾಲಯ, ಬೆಂಗಳೂರು

ಅಭಿನಂದನಾ ನುಡಿ
ಡಾ. ದೊಡ್ಡರಂಗೇಗೌಡ
ಸಮ್ಮೇಳನಾಧ್ಯಕ್ಷರು, ಲೇಖಕಿಯರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಗೀತ ಗಾಯನ : ಸಂಜೆ : ೪.೩೦ ರಿಂದ ೫.೩೦

ಖ್ಯಾತ ಗಾಯಕಿ : ಶ್ರೀಮತಿ ಶಮಿತಾ ಮಲ್ನಾಡ್
ಖ್ಯಾತ ಗಾಯಕ : ಶ್ರೀ ಆನಂದ ಮಾದಲಗೆರೆ ಮತ್ತು ತಂಡ
ನಿರೂಪಣೆ : ಶ್ರೀಮತಿ ದಿವ್ಯಾ ಆಲೂರು

ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ ಪ್ರದಾನ



ರಾಷ್ಟ್ರಕವಿ ಕುವೆಂಪು ಅವರು ವೈಚಾರಿಕ ಪ್ರಜ್ಞೆಯನ್ನು ಕನ್ನಡ ಸಾಹಿತ್ಯದಲ್ಲಿ ಮೂಡಿಸಿ ಅದರ ಹೆಗ್ಗಳಿಕೆಯನ್ನು ರಾಷ್ಟ್ರಮಟ್ಟ ಮತ್ತು ಜಾಗತಿಕ ಮಟ್ಟಕ್ಕೆ ವಿಸ್ತರಿಸಿದ ಮಹನೀಯರು. 'ರಾಮಾಯಣ ದರ್ಶನಂ' ಮೂಲಕ ಆಧುನಿಕ ಕಾಲಘಟ್ಟದಲ್ಲಿಯೂ ಮಹಾ ಕಾವ್ಯಗಳು ಬರಬಹುದು ಎನ್ನುವುದನ್ನು ತೋರಿಸಿ ಕೊಟ್ಟವರು.

ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪನವರು ಜನಿಸಿದ್ದು ೧೯೦೪ರ ಡಿಸೆಂಬರ್ ೨೯ರಂದು ತಮ್ಮ ತಾಯಿಯ ತವರೂರಾದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಹಿರೇಕೊಡಿಗೆಯಲ್ಲಿ. ತಂದೆ ವೆಂಕಟಪ್ಪ ಮತ್ತು ತಾಯಿ ಸೀತಮ್ಮ. ಅವರ ಬಾಲ್ಯ ಹಿರಿಯರ ಊರಾದ ಕುಪ್ಪಳಿಯಲ್ಲಿ ಕಳೆಯಿತು. ಆರಂಭಿಕ ಶಿಕ್ಷಣವನ್ನು ಆಗಿನ ಕೂಲಿಮಠದಲ್ಲಿ ಪಡೆದ ಕುವೆಂಪು ತೀರ್ಥಹಳ್ಳಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪಡೆದು ಮೈಸೂರಿಗೆ ಬಂದರು. ಅಲ್ಲಿ ಎಂ.ಎ.ವರೆಗೆ ವಿದ್ಯಾಭ್ಯಾಸವನ್ನು ಪಡೆದ ನಂತರ ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರೂ, ಪ್ರಾಧ್ಯಾಪಕರೂ, ಪ್ರಾಂಶುಪಾಲರೂ ಆದರು. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಹಲವು ಮಹತ್ವದ ಬದಲಾಣೆಗಳನ್ನು ತಂದರು. ಅಧ್ಯಯನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗಗಳನ್ನು ರೂಪಿಸಿ ಆಡಳಿತವನ್ನು ಪರಿಣಾಮಕಾರಿಯಾಗಿಸಿದರು. ಮಾನಸ ಗಂಗೋತ್ರಿ ಅವರ ಕನಸಿನ ಕೂಸು. ವಿಶ್ವವಿದ್ಯಾಲಯದ ಕ್ಯಾಂಪಸ್ ಹೀಗಿರಬೇಕು ಎಂದು ಕನಸು ಕಂಡ ಕುವೆಂಪು ಅದನ್ನು ನನಸಾಗಿಸಿದರು. ಕನ್ನಡ ಮಾಧ್ಯಮವನ್ನು ಪಠಣಾಮಕಾರಿಯಾಗಿ ಜಾರಿಗೆ ತರಲು ಪಠ್ಯಪುಸ್ತಕಗಳನ್ನು ಬರೆಸಿ, ಕಮ್ಮಟಗಳನ್ನು ಏರ್ಪಡಿಸಿದ ಸಾಹಸಿಯವರು. ಏಕೀಕರಣವಾಗದೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಾರೆ ಎಂಬ ಗಟ್ಟಿ ನಿಲುವು ತಳೆದ ಹೆಗ್ಗಳಿಕೆ ಅವರದು.

ಹತ್ತನೆಯ ತರಗತಿಯನ್ನು ಓದುವಾಗಲೇ ಆಂಗ್ಲ ಭಾಷೆಯಲ್ಲಿ ಕವಿತೆಯನ್ನು ಬರೆಯಲು ಆರಂಭಿಸಿದ್ದರು. ಆದರೆ ವಿಲಿಂ ಕವಿ ಜೆ.ಎಚ್. ಕಿಟ್ಸ್ ಅವರ ಕವಿತೆಗಳನ್ನು ಮೆಚ್ಚಿಕೊಂಡರೂ ಮಾತೃಭಾಷೆಯಲ್ಲಿ ಬರೆಯುವಂತೆ ಸೂಚಿಸಿದರು. ಕನ್ನಡದಲ್ಲಿ ಕುವೆಂಪು 'ಅಮಲನ ಕಥೆ'ಯಿಂದ ಬರವಣಿಗೆಯನ್ನು ಪ್ರಾರಂಭಿಸಿದರು. ಗದ್ಯ ಮತ್ತು ಪದ್ಯ ಎರಡರಲ್ಲಿಯೂ ಗಮನಾರ್ಹ ಬರವಣಿಗೆ ಮಾಡಿದ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಜಾಗತಿಕವಾಗಿ ಶ್ರೇಷ್ಠ ಕಾದಂಬರಿಗಳು ಎನ್ನಿಸಿಕೊಂಡಿವೆ. 'ಶ್ರೀರಾಮಾಯಣ ದರ್ಶನಂ' ಹೊಸಕಾಲದ ಕಾಕ್ಯೆಯಲ್ಲಿ ರೂಪುಗೊಂಡ ರಾಮಾಯಣ ಕಥನ ಎನ್ನಿಸಿಕೊಂಡಿತು. 'ಬೆರಳ್ಗೆ ಕೊರಳ್', 'ಶೂದ್ರ ತಪಸ್ವಿ', 'ರಕ್ತಾಕ್ಷಿ', 'ಜಲಗಾರ', 'ಸ್ಮಶಾನ ಕುರುಕ್ಷೇತ್ರ' ಮೊದಲಾದವು ಅವರ ಪ್ರಮುಖ ನಾಟಕಗಳು. 'ಕೊಳಲು', 'ಅಗ್ನಿಹಂಸ', 'ಪ್ರೇಮ ಕಾಶ್ಮೀರ', 'ಪಕ್ಷಿಕಾಶಿ' ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದ ಕುವೆಂಪು ಹೊಸಗನ್ನಡ ಕವಿತೆಗೆ ಭಾವಗೆ ಮತ್ತು ಬಂಧ ಎರಡರಲ್ಲಿಯೂ ಹೊಸತನ ತುಂಬಿದರು. 'ರಸೋವೈಸಃ' ಅವರ ಪ್ರಮುಖ ವಿಮರ್ಶಾ ಕೃತಿ. ಮಕ್ಕಳ ಸಾಹಿತ್ಯಕ್ಕೂ ಗಣನೀಯ ಕೊಡುಗೆಯನ್ನು ನೀಡಿದ ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿಜೋಗಿ' ನಾಡಿನ ಮಕ್ಕಳೆಲ್ಲರ ಬಾಯಲ್ಲಿ ನಲಿದಾಡಿದೆ. 'ನೆನಪಿನ ದೋಣಿ' ಅವರ ಆತ್ಮಕತೆ. 'ವಿಚಾರ ಕ್ರಾಂತಿಗೆ ಆಹ್ವಾನ'ದ ಮೂಲಕ ವೈಚಾರಿಕ ಜಾಗೃತಿ ಮೂಡಿಸಿದ ಕುವೆಂಪು 'ಮಂತ್ರ ಮಾಂಗಲ್ಯ'ದ ಮೂಲಕ ಸರಳ ವಿವಾಹದ ಪರಿಕಲ್ಪನೆಯನ್ನು ಪರಿಚಯಿಸಿದರು.

ಕನ್ನಡಕ್ಕೆ ಮೊಟ್ಟ ಮೊದಲ ಜ್ಞಾನಪೀಠ ಮತ್ತು ಕೇಂದ್ರ ಸಾಹಿತ್ಯ ಅಕಾಡಮಿ ಪುರಸ್ಕಾರಗಳನ್ನು ತಂದು ಕೊಟ್ಟ ಕುವೆಂಪು 'ಪಂಪ' ಮತ್ತು 'ಕರ್ನಾಟಕ ರತ್ನ' ಪುರಸ್ಕಾರಗಳನ್ನು ಪಡೆದ ಮೊದಲಿಗರೂ ಹೌದು. ಹೇಮಾವತಿ ಕುವೆಂಪು ಅವರ ಅನುರೂಪದ ಮಡದಿಯಾಗಿದ್ದರು. ಕೋಕಿಲೋದಯ ಚೈತ್ರ, ಪೂರ್ಣಚಂದ್ರ ತೇಜಸ್ವಿ, ಇಂದುಕಲಾ, ತಾರಿಣಿ ಅವರ ಮಕ್ಕಳು. ಅವರ ಪೈಕಿ ತೇಜಸ್ವಿ ತಂದೆಯವರಂತೆಯೇ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದರು. ಕುವೆಂಪು ಅವರು ೧೯೯೪ರ ನವಂಬರ್ ೧೧ರಂದು ಮೈಸೂರಿನಲ್ಲಿ ನಿಧನರಾದರು. ಕುಪ್ಪಳಿಯಲ್ಲಿ ಅವರ ನೆನಪಿನ ಸ್ಮಾರಕದ ಜೊತೆಗೆ ಅಧ್ಯಯನ ಕೇಂದ್ರವೂ ಇದೆ.

ಇಂತಹ ಮಹನೀಯರ ಹೆಸರಿನಲ್ಲಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ೨೦೧೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿಯನ್ನು ಸ್ಥಾಪಿಸಿದ್ದು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯಮಟ್ಟದಲ್ಲಿ ಕನ್ನಡ ನಾಡು-ನುಡಿ, ನೆಲ-ಜಲ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ, 'ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ' ಕಾರ್ಯಕ್ರಮವನ್ನು ನಿರ್ವಹಿಸುತ್ತಾ ಬಂದಿದೆ.

ಟಿ.ಎ. ನಾರಾಯಣಗೌಡ

ಶ್ರೀ ಟಿ. ಎ. ನಾರಾಯಣಗೌಡರು ನಾಡಿನ ಅಪರೂಪದ ಕನ್ನಡ ಸೇನಾನಿ. ಕನ್ನಡಿಗರ ಹೋರಾಟಕ್ಕೆ ಮಾರ್ಗದರ್ಶನ ನೀಡಿದ ಚೈತನ್ಯದ ಚಿಲುಮೆ, ಸ್ವಾಭಿಮಾನಿ ಕನ್ನಡಿಗರು. ಇವರು ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಮಾಲೇಕಲ್ ತಿರುಪತಿಯ ಎಲ್. ಅನಂತಯ್ಯ ಮತ್ತು ಗೌರಮ್ಮ ದಂಪತಿಗಳ ಒಟ್ಟು ಐದು ಮಕ್ಕಳಲ್ಲಿ ಎರಡನೇ ಪುತ್ರ ನಾರಾಯಣಗೌಡರು ಜೂನ್ ೧೦, ೧೯೬೭ರಲ್ಲಿ ಜನಿಸಿದರು.

ಕಾವೇರಿ ವಿವಾದ ಎದುರಾದಾಗಲೆಲ್ಲ, ಕನ್ನಡಿಗರು ಸಂಕಷ್ಟಕ್ಕೆ ಸಿಲುಕಿದಾಗಲೆಲ್ಲ 'ಕಾವೇರಿ ರಥ ಯಾತ್ರೆ' ಮೂಲಕ ನ್ಯಾಯಕ್ಕಾಗಿ ಕಹಳೆ ಮೊಳಗಿಸಿದ್ದಾರೆ. ದೆಹಲಿಗೂ ಕಾರ್ಯಕರ್ತರನ್ನು ಕರೆದುಕೊಂಡು ಹೋಗಿ ಪ್ರತಿಭಟನೆ ನಡೆಸುವುದರ ಮೂಲಕ ಆಳುವ ಸರ್ಕಾರಗಳ ನಿದ್ದೆಗೆಡಿಸಿದ್ದಾರೆ. ಇದೇ ರೀತಿ ಕೃಷ್ಣಾ ನದಿ ನೀರಿಗಾಗಿ, ಚತ್ರಾವತಿ ಅಣೆಕಟ್ಟು ನಿರ್ಮಾಣವಾಗುವುದಕ್ಕಾಗಿ ಮತ್ತು ಕಳಸಾ ಬಂಡೂರಿ ಯೋಜನೆಗೆ ಕುತ್ತು ಬಂದಾಗ ರಾಜ್ಯಾದ್ಯಂತ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರನ್ನು ಸಂಘಟಿಸಿ ಹೋರಾಟ ನಡೆಸಿದ್ದಾರೆ. ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ಎಂಇಎಸ್ ಪುಂಡರ ಧೋರಣೆ ವಿರುದ್ಧ ಅಕ್ಷರಶಃ ಸಮರ ಸಾರಿದವರು ಟಿ.ಎ. ನಾರಾಯಣಗೌಡರು. ಬೆಳಗಾವಿಯ ಎಲ್ಲಾ ತಾಲೂಕುಗಳಲ್ಲಿ ಪ್ರವಾಸ ಮಾಡಿ ಯುವಕ-ಯುವತಿಯರಿಗೆ ಕನ್ನಡದ ದೀಕ್ಷೆಯನ್ನು ನೀಡುವುದರ ಮೂಲಕ ಅವರಲ್ಲಿ ಸ್ವಾಭಿಮಾನ, ಹೋರಾಟದ ಕಿಚ್ಚನ್ನು ಹುಟ್ಟಿದರು. ಬೆಳಗಾವಿ ಮಹಾನಗರ ಪಾಲಿಕೆಯನ್ನು ಕನ್ನಡಿಗರ ವಶಕ್ಕೆ ತಂದುಕೊಡಲು ಎಂಇಎಸ್ ವಿರುದ್ಧ ಕನ್ನಡ ಅಭ್ಯರ್ಥಿಗಳನ್ನು ನಿಲ್ಲಿಸಿ, ಅವರ ವಿಜಯಕ್ಕೆ ಕಾರಣರಾದರು. ಬೆಳಗಾವಿ ಮಹಾನಗರ ಪಾಲಿಕೆಗೆ ಕನ್ನಡದ ಒಬ್ಬ ಸಾಮಾನ್ಯ ಕಾರ್ಯಕರ್ತೆ ಹದಿನೇಳು ವರ್ಷಗಳ ನಂತರ ಮಹಾಪೌರರಾಗಿ ಆಯ್ಕೆಯಾಗುವಲ್ಲಿ ಪ್ರಮುಖ ಪಾತ್ರವಹಿಸಿದರು.

ಐಟಿ-ಬಿಟಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಬೇಕೆಂಬುದರ ಬಗ್ಗೆ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗುವುದಕ್ಕೆ, ಆನ್‌ಲೈನ್ ಲಾಟರಿ ನಿಷೇಧಿಸಲು ನಾರಾಯಣಗೌಡರು ರಾಜ್ಯಾದ್ಯಂತ ತೀವ್ರ ಸ್ವರೂಪದ ಹೋರಾಟವನ್ನು ಕೈಗೊಂಡರು. ಈ ಹೋರಾಟದ ಫಲವಾಗಿ ಕೊನೆಗೆ ಸರ್ಕಾರ ಅನಿವಾರ್ಯವಾಗಿ ಕರ್ನಾಟಕದಲ್ಲಿ ಆನ್‌ಲೈನ್ ಲಾಟರಿಯನ್ನು ನಿಷೇಧಿಸಿತು.

ಬೆಂಗಳೂರಿನಲ್ಲಿ ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸಲು ಚಿತ್ರಮಂದಿರಗಳೇ ಸಿಗದಿದ್ದಾಗ, ಪರಭಾಷಾ ಸಿನಿಮಾ ಲಾಬಿಯನ್ನು ಹಿಮ್ಮೆಟ್ಟಿಸಿ ಸಾವಿರಾರು ಕಾರ್ಯಕರ್ತರೊಂದಿಗೆ ತೀವ್ರ ಸ್ವರೂಪದ ಹೋರಾಟವನ್ನು ನಾರಾಯಣಗೌಡರು ಕೈಗೊಂಡ ಫಲವಾಗಿ ಇಂದು ಕನ್ನಡ ಚಲನಚಿತ್ರಗಳು ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಾಣುತ್ತಿವೆ. ಜಾಗತಿಕಮಟ್ಟದಲ್ಲಿ ಕಪ್ಪುಪಟ್ಟಿಯಲ್ಲಿದ್ದ ಹೊಸ್ಕೋಟೆ ಸಂಸ್ಥೆ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನಲ್ಲಿ ಉಕ್ಕಿನ ಘಟಕ ಸ್ಥಾಪಿಸಲು ರಾಜ್ಯ ಸರ್ಕಾರವು ಒಪ್ಪಿಗೆ ನೀಡಿತ್ತು. ಈ ಘಟಕ ಸ್ಥಾಪನೆಯಿಂದಾಗಿ ರೈತರ ಫಲವತ್ತಾದ ಸಾವಿರಾರು ಎಕರೆ ಭೂಮಿ ಕಂಪನಿಯ ಪಾಲಾಗುತ್ತಿತ್ತು. ನಾರಾಯಣಗೌಡರು ತಮ್ಮ ಕಾರ್ಯಕರ್ತರೊಂದಿಗೆ ತೀವ್ರ ಸ್ವರೂಪದ ಚಳವಳಿ ಆರಂಭಿಸಿ ಆ ಸಂಸ್ಥೆಯೂ ರಾಜ್ಯಕ್ಕೆ ಕಾಲಿಡದಂತೆ ಮಾಡಿದರು.

ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಬೇಕೆಂಬ ಹಕ್ಕೊತ್ತಾಯ, ಹಿಂದಿ ಹೇರಿಕೆಯ ವಿರುದ್ಧ ಅವಿರತ ಸಮರ, ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದಾಗಿ ಜಮೀನು ಕಳೆದುಕೊಂಡ ರೈತರಪರ ಹೋರಾಟ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರನ್ನು ನಾಮಕರಣ ಮಾಡಲು ಹಕ್ಕೊತ್ತಾಯ ಮತ್ತು ತಿರುವಳ್ಳವರ್ ಪ್ರತಿಮೆ ಅನಾವರಣ ಖಂಡಿಸಿ ಪ್ರತಿಭಟನೆ ಹೀಗೆ ಆಯಾ ಸಮಯದಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕಕ್ಕೆ ಕುತ್ತು ಬಂದಾಗಲೆಲ್ಲ ರಕ್ಷಣಾ ವೇದಿಕೆಯ ಕಾರ್ಯಕರ್ತರೊಂದಿಗೆ ವೀರ ಸೈನಿಕನಂತೆ ಮುನ್ನುಗ್ಗಿ ಹೋರಾಟ ಮಾಡಿದ್ದಾರೆ. ನಾರಾಯಣಗೌಡರು ಕನ್ನಡ ಶಾಲೆಯೊಂದನ್ನು ದತ್ತು ತೆಗೆದುಕೊಂಡು ಪ್ರತಿವರ್ಷ ಮಕ್ಕಳಿಗೆ ಪುಸ್ತಕ, ಸಮವಸ್ತ್ರ ಮುಂತಾದ ನೆರವನ್ನು ನೀಡುತ್ತಿದ್ದಾರೆ.

ಸಾಹಿತ್ಯ ಮತ್ತು ಸಂಸ್ಕೃತಿಯ ಗೌಡರ ಆಸಕ್ತಿಯ ಕ್ಷೇತ್ರ ಅವರು 'ಗಂಗಾ ಪ್ರಕಾಶನ' ಸಂಸ್ಥೆಯನ್ನು ಸ್ಥಾಪಿಸಿ ಆ ಮೂಲಕ ಹತ್ತಾರು ಕೃತಿಗಳನ್ನು ಹೊರ ತಂದಿದ್ದಾರೆ. ಅಂಕಣ ಬರಹ 'ಸೇರಸುಡಿ', ಗೌಡರ ಪತ್ನಿ ವಿಶಾಲಾಕ್ಷಿಯವರ 'ಸಲ್ಲುಡಿ', ಇತರ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಕರವೇ ಸಲ್ಲುಡಿ' ಎಂಬ ಮಾಸ ಪತ್ರಿಕೆಯನ್ನು ಕಳೆದ ಹನ್ನೊಂದು ವರ್ಷಗಳಿಂದ ಪ್ರಕಟಿಸುತ್ತಿದ್ದಾರೆ. ಈ ಪತ್ರಿಕೆ ಕನ್ನಡ ಜನಮಾನಸದ ಪ್ರತಿಬಿಂಬವಾಗಿ ಹೊರಬರುತ್ತಿದೆ.

ನಾಡಿನ ಅನೇಕ ಮಠಮಾನ್ಯರು, ಸಂಘಸಂಸ್ಥೆಗಳು, ಅಭಿಮಾನಿಗಳು ರಾಜ್ಯದ ವಿವಿಧ ಭಾಗಗಳಲ್ಲಿ ಗೌಡರಿಗೆ ಸನ್ಮಾನಿಸಿ ನೀಡಿದ್ದ ಬೆಳ್ಳಿ ಗದೆ ಮತ್ತು ಬೆಳ್ಳಿ ಕಿರೀಟಗಳನ್ನು ಸಾರ್ವಜನಿಕವಾಗಿ ಹರಾಜು ನಡೆಸಿ ಬಂದ ೪೯ ಲಕ್ಷ ರೂಪಾಯಿಗಳ ಹಣವನ್ನು ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರಾಜ್ಯದ ವಿವಿಧ ಭಾಗಗಳ ರೈತ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ ಸಾರ್ವಜನಿಕ ಬದುಕಿನಲ್ಲಿ ಆದರ್ಶವಾಗಿದ್ದಾರೆ.

ಕನ್ನಡ ನೆಲ, ಜಲ, ಕನ್ನಡಿಗರ ನೆಮ್ಮದಿಯ ಬದುಕಿಗಾಗಿ ನಾರಾಯಣಗೌಡರು ಕಳೆದ ೩೫ ವರ್ಷಗಳಿಂದ ಹೋರಾಟ ನಡೆಸುತ್ತಿದ್ದಾರೆ. ಅವರನ್ನು ಹಲವಾರು ಉನ್ನತ ಪ್ರಶಸ್ತಿಗಳು ಹುಡುಕಿಕೊಂಡು ಬಂದಿದೆ. ಆದರೆ ಇದುವರೆಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಯಾವೊಂದು ಪ್ರಶಸ್ತಿಯನ್ನು ಅವರು ಸ್ವೀಕರಿಸಿಲ್ಲ. ಆದರೆ ಕನ್ನಡ ಸಾಹಿತ್ಯ ಪರಿಷತ್ತು ೨೦೨೩ನೇ ಸಾಲಿನ 'ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ'ಯನ್ನು ನೀಡುತ್ತಿದ್ದು, ಕುವೆಂಪು ಸಾಹಿತ್ಯ ಪ್ರೇರಣೆಯಿಂದ ಕನ್ನಡ ಹೋರಾಟಕ್ಕೆ ಬಂದ ಗೌಡರು ಈ ಪ್ರಶಸ್ತಿಯನ್ನು ತಮ್ಮ ಜೀವನದಲ್ಲಿ ಮೊಟ್ಟಮೊದಲ ಪ್ರಶಸ್ತಿಯಾಗಿ ಸ್ವೀಕರಿಸುತ್ತಿದ್ದಾರೆ. ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ ಸ್ವೀಕರಿಸುತ್ತಿರುವ ನಾರಾಯಣಗೌಡ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತು ಅಭಿನಂದಿಸುತ್ತಿದೆ.